11.	Mandya District	1
12.	Mysore District	2
13.	Raichur District	2
14.	Tumkur District	2
15.	Gulbarga District	1
		27
16.	+ 14 Munsiffs (Leave Reserve, High Court, Bangalore)	14
	Total	41

2. The posts of Munsiffs are vacant ranging from 16 days to 3 years.
3. Yes.
4. Action will be taken to fill up the vacant posts of Munsiffs.

ತುಮಕೂರಿನಲ್ಲಿ 40 ಮೆ. ವ್ಯಾಟ್ಸ್‌ನ ಡೀಸಲ್ ಉತ್ಪಾದನಾ ಕೇಂದ್ರದ ಸ್ಥಾಪನೆ ಬಗ್ಗೆ.

1796. ಶ್ರೀ ಆರ್. ನಾರಾಯಣ (ಬೆಳ್ಳಾವಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರಿನಲ್ಲಿ ವಿದ್ಯುತ್ ಸರಬರಾಜಿನ ವೋಲ್ಟೇಜ್‌ನ್ನು ಉತ್ತಮಪಡಿಸಲು ಮತ್ತು ಓವರ್ ಲೋಡ್‌ನ್ನು ಕಡಿಮೆ ಮಾಡಲು ಒಂದು 40 ಮೆಗಾವಾಟ್ ಡೀಸಲ್ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಸರ್ಕಾರವು ಕ್ರಮ ತೆಗೆದುಕೊಂಡಿದೆಯೇ ?

ಆ) ಹಾಗಿಲ್ಲದಿದ್ದರೆ ಓವರ್ ಲೋಡ್ ಮತ್ತು ಕಡಿಮೆ ವೋಲ್ಟೇಜ್‌ನ್ನು ಉತ್ತಮಪಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) ತುಮಕೂರಿನಲ್ಲಿ 40 ಮೆ.ವಾ. ಡೀಸೆಲ್ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸುವ ಯೋಜನೆ ಇಲ್ಲ.

ಆ) ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜನ್ನು ಉತ್ತಮಪಡಿಸಲು ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ .

1) ವಿಶ್ವಬ್ಯಾಂಕ್ ಆರ್ಥಿಕ ನೆರವಿನೊಂದಿಗೆ ತುಮಕೂರು ತಾ: ಅಂತರಸನಹಳ್ಳಿಯಲ್ಲಿ ಒಂದು 200:66 ಕೆ.ವಿ. ಉಪಕೇಂದ್ರವನ್ನು ಸ್ಥಾಪಿಸಲಾಗುವುದು. ಇಲ್ಲಿ ಎರಡು 100 ಎಂ.ವಿ.ಎ. ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗುವುದು.

2) ಇನ್ನೊಂದು 220:110 ಕೆ.ವಿ. ಉಪಕೇಂದ್ರವನ್ನು ತಿಪಟೂರು ತಾಲ್ಲೂಕಿನ ಕಿಬ್ಬನಹಳ್ಳಿ ಕ್ರಾಸ್ ಹತ್ತಿರ ಸ್ಥಾಪಿಸಲಾಗುತ್ತಿದೆ. ಇಲ್ಲಿ ಒಂದು 100 ಎಂ.ವಿ.ಎ. ಟ್ರಾನ್ಸ್‌ಫಾರ್ಮರನ್ನು ಹಾಕಲಾಗುವುದು.

3) ಹೊಸ 66:11 ಕೆ.ವಿ. ಉಪಕೇಂದ್ರಗಳನ್ನು ಕಲ್ಲಂಬೆಲ್ಲ. ಚೇಲೂರು ಮತ್ತು ಕೋಲಾಲಗಳಲ್ಲಿ ಸ್ಥಾಪಿಸಲಾಗುವುದು.

4) ತುಮಕೂರು ಉಪಕೇಂದ್ರದಲ್ಲಿರುವ ಟ್ರಾನ್ಸ್‌ಫಾರ್ಮರನ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು.

5) ಕೆಪಾಸಿಟರ್ ಬ್ಯಾಂಕ್‌ಗಳನ್ನು 11 ಕೆ.ವಿ. ಲೈನ್‌ಗೆ ಮತ್ತು ಉಪಕೇಂದ್ರಗಳಲ್ಲಿ ಅಳವಡಿಸಲಾಗುವುದು.

ಜಯನಗರ ಬಸ್ ನಿಲ್ದಾಣದ ವಿಸ್ತರಣೆ ಬಗ್ಗೆ.

1572. ಶ್ರೀ ರಾಮಲಿಂಗಾ ರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರಿನ ಜಯನಗರ ಬಸ್ ನಿಲ್ದಾಣಕ್ಕೆ ಪ್ರತಿದಿನ ಬರುವ ಬಿ.ಟಿ.ಎಸ್. ಬಸ್ಸುಗಳ ಸಂಖ್ಯೆ:

ಆ) ಜಯನಗರ ಬಸ್ ನಿಲ್ದಾಣದಿಂದ ಪ್ರತಿದಿನ ಹೊರಡುವ ಬಸ್ಸುಗಳ ಸಂಖ್ಯೆ ;

ಇ) ಈಗಿರುವ ಬಸ್ ನಿಲ್ದಾಣ ಸಾಕಾಗದಿರುವುದು ನಿಜವೇ ;

ಈ) ಹಾಗಿದ್ದಲ್ಲಿ. ಜಯನಗರದಲ್ಲಿ ಮತ್ತೊಂದು ಬಸ್ ನಿಲ್ದಾಣವನ್ನು ನಿರ್ಮಿಸಲು ಸರ್ಕಾರ ಯೋಜಿಸಿದೆಯೇ :

ಉ) ಇಲ್ಲದಿದ್ದಲ್ಲಿ. ಪ್ರಸಕ್ತ ಇರುವ ಬಸ್ ನಿಲ್ದಾಣವನ್ನು ವಿಸ್ತರಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಅಜೇಜ್ ಸೇಠ್ (ಸಾರಿಗೆ ಮತ್ತು ವರ್ಕ್ಸ್ ಸಚಿವರು) :

ಅ) 125 ಬಸ್ಸುಗಳು (1500 ಟ್ರಿಪ್ಪುಗಳು).

ಆ) 19 ಬಸ್ಸುಗಳು (273 ಟ್ರಿಪ್ಪುಗಳು).

ಇ) ಹೌದು.

ಈ) ಇಲ್ಲ.

ಉ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರಸ್ತುತ ಬಸ್ ನಿಲ್ದಾಣವನ್ನು ವಿಸ್ತರಿಸುವ ಬಗ್ಗೆ ಬೆಂಗಳೂರು ನಗರ ಪಾಲಿಕೆಯನ್ನು ನಿಲ್ದಾಣಕ್ಕೆ ಹೊಂದಿಕೊಂಡಿರುವ ಜಾಗವನ್ನು